***ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 31.01.2026***

***ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.***

***ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ***

1. ದಿಃ 22.10.2022 ರಂದು ಅಪಘಾತವಾಯಿತು. ಆ ದಿನ ನಾನು ಪಾಂಡವಪುರದಿಂದ ಬೆಳ್ಳಾಳೆಗೆ ಹೋಗುತ್ತಿದ್ದೆನು. ಅಪಘಾತ ಬನ್ನಘಟ್ಟದ ಬಳಿ ಪ್ಲೇಗಮ್ಮನ ದೇವಸ್ಥಾನದ ಬಳಿ ಆಯಿತು. ಅರ್ಜಿದಾರರು ಮಹದೇಶ್ವರದ ಕಡೆಯಿಂದ ಪಾಂಡವಪುರದ ಕಡೆಗೆ ಟಿ ವಿ ಎಸ್ ಮೊಪೆಡ್ ನಲ್ಲಿ ಬರುತ್ತಿದ್ದರು. ಅರ್ಜಿದಾರರ ಟಿ ವಿ ಎಸ್ ಮೋಟಾರ್ ಸೈಕಲ್ ನಂಬರನ್ನು ನನಗೆ ಹೇಳಲು ಗೊತ್ತಿಲ್ಲ. ಸ್ವಿಫ್ಟ್ ಕಾರು ಅರ್ಜಿದಾರರಿಗೆ ಡಿಕ್ಕಿ ಮಾಡಿತ್ತು. ಸ್ವಿಫ್ಟ್ ಕಾರಿನ ನಂಬರನ್ನು ಈಗ ಹೇಳಲು ಗೊತ್ತಿಲ್ಲ. ಸ್ವಿಫ್ಟ್ ಕಾರು ಪಾಂಡವಪುರ ಕಡೆಯಿಂದ ನಾಗಮಂಗಲದ ಕಡೆಗೆ ಹೋಗುತ್ತಿತ್ತು. ಈ ಅಪಘಾತ ನಿಮ್ಮ ಪ್ರಕಾರ ಎರಡು ವಾಹನಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿತ್ತು ಎಂದರೆ ಸರಿ. ವಾಹನಗಳನ್ನು ನಾನು ಮೂರು ಮೀಟರ್ ಅಂತರದಿಂದ ನೋಡಿರುತ್ತೇನೆ . ಸ್ವಿಫ್ಟ್ ಕಾರು ಎಷ್ಟು ವೇಗಮಿತಿಯಲ್ಲಿ ಬರುತ್ತಿತ್ತು ಎಂದು ಹೇಳಲಾಗುವುದಿಲ್ಲ. ಅಪಘಾತವಾಗಿದೆ ಎನ್ನಲಾದ ಸ್ಥಳ ಪಾಂಡವಪುರ ನಾಗಮಂಗಲ ಮುಖ್ಯ ರಸ್ತೆ ಎಂದರೆ ಸರಿ. ಆ ರಸ್ತೆಯಲ್ಲಿ ಹೆಚ್ಚಿನ ವಾಹನಗಳ ದಟ್ಟಣೆ ಇರುತ್ತದೆ ಎಂದರೆ ಸರಿ. ಅರ್ಜಿದಾರರು ಆದಿನ ಮಧ್ಯಪಾನ ಮಾಡಿಕೊಂಡು ಅತಿವೇಗ

ಮತ್ತು ಅಜಾಗರುಾಕತೆಯಿಂದ ಚಾಲನೆ ಮಾಡಿದ್ದರು ಎಂದರೆ ಸರಿಯಲ್ಲ. ಮದ್ಯಪಾನ ಮಾಡಿದ್ದರಿಂದ ಅರ್ಜಿದಾರರೇ ಸ್ವತಃ ಕಾರಿಗೆ ಡಿಕ್ಕಿ ಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ವಿಚಾರ ನಿಮಗೆ ಗೊತ್ತಿದ್ದರೂ ಅರ್ಜಿದಾರರಿಗೆ ಪರಿಹಾರ ಸಿಗಲಿ ಎಂದು ಅವರ ಹೇಳಿಕೊಟ್ಟ ಹಾಗೆ ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.

2. ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ್ ಬಂದಿತ್ತು. ಅಪಘಾತದ ಬಗ್ಗೆ ನಾನೇ ದಿಃ 27.10.2022 ರಂದು ಪೊಲೀಸರಿಗೆ ದೂರು ಕೊಟ್ಟೆನು. ತಡವಾಗಿ ದೂರು ಕೊಡಲು ಕಾರಣ ಎನು ಎಂದರೆ ಸಾಕ್ಷಿ ಅರ್ಜಿದಾರರನ್ನು ಆಸ್ಪತ್ರೆಗೆ ಸೇರಿಸಿ ನೋಡಿಕೋಳ್ಳುತ್ತಿದ್ದರಿಂದ ತಡವಾಯಿತು ಎಂದು ಹೇಳುತ್ತಾರೆ, ಅರ್ಜಿದಾರರಿಗೆ ವಿವಾಹವಾಗಿಲ್ಲ ಹಾಗೂ ತಂದೆ ತಾಯಿ ಇಲ್ಲ. ಅರ್ಜಿದಾರರ ತಪ್ಪಿನಿಂದ ಅಪಘಾತವಾಗಿರುವುದರಿಂದ ನೀವು ತಡವಾಗಿ ದೂರು ನೀಡಿರುತ್ತೀರಾ ಎಂದರೆ ಸರಿಯಲ್ಲ. ಅರ್ಜಿದಾರರು ಮತ್ತು ನೀವು ಸಂಬಂಧಿಕರು ಎಂದರೆ ಸರಿ. ಅರ್ಜಿದಾರರಿಗೆ ನಾನು ಅತ್ತೆ ಮಗ ಆಗಬೇಕು. ಅಪಘಾತದ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಈ ನ್ಯಾಯಾಲಯ ಹೊರುತ ಪಡಿಸಿ ಅಪಘಾತದ ಬಗ್ಗೆ ಬೇರೆ ಯಾವುದೇ ನ್ಯಾಯಾಲಯದಲ್ಲಿ ನಾನು ಸಾಕ್ಷಿ ನೀಡಿಲ್ಲ. ಮತ್ತೊಂದು 800 ಕಾರಿನ ನಂಬರನ್ನು ಈಗ ನನಗೆ ಹೇಳಲಾಗುವುದಿಲ್ಲ. ಮಾರುತಿ 800 ಕಾರಿನವರು ಪೊಲೀಸರಿಗೆ

*ದೂರು ನೀಡಿಲ್ಲ. ಅಪಘಾತವಾಗಿರುವುದು ಸತ್ಯವಾಗಿದ್ದರೆ ಕೆಎ-02/ಎನ್-0092 ಕಾರಿನ ಚಾಲಕ ಪೊಲೀಸರಿಗೆ ದೂರು ಕೊಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.*

*3. ಪ್ರಮಾಣಪತ್ರ ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟೆನು. ನಿಮ್ಮ ಅತ್ತೆ ಮಗನಿಗೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷಿ ಕೊಡುತ್ತಿದಿರಾ ಎಂದರೆ ಸರಿಯಲ್ಲ. ಅಪಘಾತ ಸ್ವಿಫ್ಟ್ ಕಾರಿನಿಂದ ಆಗಿರದೆ ಇರುವುದರಿಂದ ಅದರ ನೋಂದಣಿ ಸಂಖ್ಯೆ ಈಗ ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮರೆತು ಹೋಗಿದೆ ಎಂದು ಹೇಳುತ್ತಾರೆ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***